VII. Shri. K. J. George (Minister for Housing & Urban Development) ಇವರ ಪರವಾಗಿ ಶ್ರೀ ಶಿವಣ್ಣ (ಕಾನೂನು ಮತ್ತು ಸಮಾಜಕಲ್ಯಾಣ) ಸಚಿವರು :—**I beg to lay**

12. Audit Report of the following Urban Development Authorities for the years from 1984–85 to 1987–88.

1. Gulbarga — 1984–85 and 1985–86
2. Hassan — 1985–86
3. Davanagere — 1987–88

as required under Section 48 (5) of Karnataka Urban Development Authority Act, 1987.

ಶ್ರೀ ಬಿ. ಎಸ್. ಯಡಿಯೂರಪ್ಪ :– ಮಾನ್ಯ ಅಧ್ಯಕ್ಷರೇ, ನಾನು ನಿಲುವಳಿ ಸೂಚನೆ ಮೂಲಕ ಒಂದು ಪ್ರಮುಖ ವಾದ ವಿಷಯವನ್ನು ಕಳುಹಿಸಿದ್ದೇನೆ.

ಅಧ್ಯಕ್ಷರು :– ಒಂದು ನಿಮಿಷ. ಮೊದಲು ಅರ್ಜಿಗಳನ್ನು ಒಪ್ಪಿಸಿಬಿಡಲಿ.

ಅರ್ಜಿಗಳನ್ನೊಪ್ಪಿಸುವುದು.

ಶ್ರೀ ಜೆ. ಎಸ್. ಆಚಾರ್ :– ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ಅರಣ್ಯಗಳು ನಾಶ ವಾಗುತ್ತಿರುವ ಬಗ್ಗೆ ಅರ್ಜಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು :– ಒಪ್ಪಿಸಲಾಯಿತು.

ಶ್ರೀ ವಸಂತ ವಿ. ಸಾಲಿಯಾನ್ :– ಮಾನ್ಯ ಅಧ್ಯಕ್ಷರೇ, ರಾಯಚೂರು ಜಿಲ್ಲೆಯ ಕರ್ನಾಟಕ ಅಗ್ರೋ ಫ್ರೋಟೀನ್ಸ್ ಲಿ. ಸಂಸ್ಥೆಯ ಕಾರ್ಮಿಕರನ್ನು ವಿಲೀನಗೊಳಿಸುವ ಬಗ್ಗೆ ಅರ್ಜಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು :– ಒಪ್ಪಿಸಲಾಯಿತು.

ನಿಲುವಳಿ ಸೂಚನೆ

ವಿಷಯ :– ಕೆ. ಎಸ್. ಆರ್. ಟಿ. ಸಿ. ಪ್ರಯಾಣ ದರದ ಮೇಲೆ ಶೇಕಡ 10 ರಷ್ಟು ಕೊಲ್ಲಿ ಸುಂಕವನ್ನು ವಿಧಿಸಲಾಗುವುದೆಂದು ಸಾರಿಗೆ ಸಚಿವರ ಹೇಳಿಕೆ.

† ಶ್ರೀ ಪಿ. ಜಿ. ಆರ್. ಸಿಂಧ್ಯ :– ಮಾನ್ಯ ಅಧ್ಯಕ್ಷರೇ, ನಾನು ಒಂದು ವಿಚಾರವನ್ನು ಪ್ರಸ್ತಾಪ ಮಾಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ :– ಮಾನ್ಯ ಅಧ್ಯಕ್ಷರೇ, ನಾನು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ :– ಇದು ಬಹಳ ಮುಖ್ಯವಾದ ವಿಷಯ. ನಿನ್ನೆ ರಿನ ಹುಬ್ಳಿಯಲ್ಲಿ ಸಾರಿಗೆ ಇಲಾಖೆಯ ಮಾನ್ಯ ಮಂತ್ರಿಗಳಾಗಿರತಕ್ಕಂಥ ಮಾನ್ಯ ಅಜೀಜ್ ಸೇಠ್‌ರವರು ಕೆ.ಎಸ್.ಆರ್.ಟಿ.ಸಿ. ಬಸ್‌ಪ್ರಯಾಣ ದರದ ಮೇಲೆ ಶೇಕಡ 10 ರಷ್ಟು ಕೊಲ್ಲಿ ಸುಂಕವನ್ನು ಹಾಕುತ್ತೇವೆಂದು ಹೇಳಿದ್ದಾರೆ.

ಅಧ್ಯಕ್ಷರು :– ಹಾಕುತ್ತೇವೆಂದು ಹೇಳಿಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯ :– ಕೆ.ಎಸ್.ಆರ್.ಟಿ.ಸಿ. ಪ್ರಯಾಣ ದರದ ಮೇಲೆ ಶೇಕಡ ಹತ್ತರಷ್ಟು ಕೊಲ್ಲಿ ಸರ್‌ಚಾರ್ಜ್ ವಿಧಿಸಲಾಗುವುದೆಂದು ಅವರು ಹೇಳಿರುವುದು ಪ್ರಜಾವಾಣಿ ಪತ್ರಿಕೆಯ ಮುಖ ಪುಟದಲ್ಲಿ ಇದೆ. ಅದನ್ನು ತಮಗೆ ಕಳುಹಿಸಿಕೊಡುತ್ತೇನೆ.

ಅಧ್ಯಕ್ಷರು :– ಹಾಗೆ ಹೇಳಿದ್ದಾರೆಯೇ ಎಂದು ಮಂತ್ರಿಗಳನ್ನು ಕೇಳೋಣ.

ಶ್ರೀ ವಾಟಾಳ ನಾಗರಾಜ್ :– ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಮಾತನಾಡಬೇಕಾಗುತ್ತದೆ.

ಅಧ್ಯಕ್ಷರು :– ಮಾನ್ಯ ಸಿಂಧ್ಯಾರವರೇ ನೀವು ನಮೂದಿಸಿದ್ದೀರಿ. ಅವರನ್ನು ಕೇಳೋಣ. ಅವರು ಏನು ಹೇಳುತ್ತಾರೋ ?

ಶ್ರೀ ಪಿ. ಜಿ. ಆರ್. ಸಿಂಧ್ಯ :– ಮಾನ್ಯ ಅಧ್ಯಕ್ಷರೇ, ನಾನು ಬಯಸುವುದಿಷ್ಟೇ, 6 ತಿಂಗಳ ಮುಂಚೆ ಕೆ.ಎಸ್. ಆರ್.ಟಿ.ಸಿ. ಬಸ್ ದರಗಳನ್ನು ರಿವೈಸ್ ಮಾಡಿದರು. ಆಗ ಮಂತ್ರಿಯಾಗಿದ್ದ ಜಾರ್ಜ್‌ರವರು ಏನು ಹೇಳಿದರು?

ಅಧ್ಯಕ್ಷರು :– ನೀವು ಚರ್ಚೆಗೆ ಹೋಗುತ್ತಿದ್ದೀರಿ. ಅವರು ಏನು ಹೇಳುತ್ತಾರೋ ಕೇಳೋಣ.